O.S. NO. 351/2023
PW - 1.
Dated 22-07-2025

ಸಾಕ್ಷಿಯನ್ನು ಈ ದಿನ ದಿನಾಂಕ 22-07-2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟಿ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ ಆಯ್ ಬಿ ವಾಯ್ ವಕೀಲರಿಂದಃ

ಪ್ರಸ್ತುತ ದಾವೆ ವಾದ ಪತ್ರ ಬರೆಯಲು ವಕಿಲರಿಗೆ ಮಾಹಿತಿ ನಾನೇ ಕೊಟ್ಟಿರುತ್ತೇನೆ. ದಾವಾ ಆಸ್ತಿ ಎಂದರೆ ದೊಡವಾಡ ಗ್ರಾಮದ ಜಮಿನು ಎಂದರೆ ಸರಿ. ಅದರ ಹಳೆ ಸರ್ವೆ ನಂ 475/3 ಕ್ಷೇತ್ರ 7 ಎಕರೆ 6 ಗುಂಟೆ ಎಂದರೆ ಸರಿ. ಸದರಿ ದಾವಾ ಆಸ್ತಿ ಸರ್ವೆ ನಂಬರ ಈಗ 475/4 ಅಂತಾ ಹೊಸ ನಂಬರ ಆಗಿರುತ್ತದೆ ಎಂದರೆ ಸರಿ. ನಾನು ಮತ್ತು ಮೈತ ಬಸಪ್ಪ ಮತ್ತು ಈರಪ್ಪ ಸೇರಿ ಸಾಮೂಹಿಕವಾಗಿ ಖರೀದಿ ಮಾಡಿರುತ್ತೇವೆ ಎಂದರೆ ಸರಿ. ಸದರಿ ಖರೀದಿ ಪತ್ರ ಪ್ರಸ್ತುತ ದಾವೆಯಲ್ಲಿ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ಸದರಿ ಖರೀದಿ ಪತ್ರದಲ್ಲಿ ಬರೆದಿರುವ ಮಾಹಿತಿ ಸರಿ ಇರುತ್ತದೆ. ಸದರಿ ಖರೀದಿ ಪತ್ರದಲ್ಲಿ ನಾನು ಮತ್ತು ಮೈತ ಈರಪ್ಪ 2/7 ಹಿಸ್ಸೆ ಖರೀದಿ ಪಡೆದಿರುತ್ತೇವೆ ಎಂದರೆ ಸಾಕ್ಷಿ 1/3 ಹಿಸ್ಸೆ ಎಂದು ನುಡಿದಿರುತ್ತಾರೆ. ಸದರಿ ಮೃತ ಬಸಪ್ಪ ನಮ್ಮ ಜೊತೆ 3/7 ಹಿಸ್ಸೆ ಖರೀದಿ ಮಾಡಿರುತ್ತಾನೆ ಎಂದರೆ ಸರಿ. ಸದರಿ ದಾವಾ ಆಸ್ತಿ ಮೂಲತ ಶಿವಪ್ಪ ಬೊಳಪ್ಪ ನಂದೆನ್ನವರ ರವರಿಗೆ ಸೇರಿತ್ತು ಎಂದರೆ ಸರಿ. ಸದರಿ ಆಸ್ತಿಯನ್ನು ದಿನಾಂಕ 26-06-1979 ರಂದು ನಾನು ಮತ್ತು ಮೃತ ಈರಪ್ಪ ಮತ್ತು ಬಸಪ್ಪ ಸೇರಿ ಜಂಟಿ ಆಗಿ ಖರೀದಿ ಮಾಡಿರುತ್ತೇವೆ ಎಂದರೆ ಸರಿ. ಖರೀದಿ ಆದ ನಂತರ ನಾನು ಮತ್ತು ಮತ ಈರಪ್ಪ ದಾವಾ ಆಸ್ತಿಯ ತಲಾ 2/7 ಹಿಸ್ಸೆ ಯ ಪ್ರತ್ಯೇಕ ಕಬ್ಜಾ

ವಹಿವಾಟಿನಲ್ಲಿ ಇರುತ್ತೇವೆ ಎಂದರೆ ಸರಿ. ಅದೇ ರೀತಿ ಮೃತ ಬಸಪ್ಪ ಖರೀದಿ ಆದ ನಂತರ ದಾವಾ ಆಸ್ತಿಯ 3/7 ಹಿಸ್ಸೆಯಲ್ಲಿ ಕಬ್ಜಾ ವಹಿವಾಟನಲ್ಲಿ ಇದ್ದನು ಎಂದರೆ ಸರಿ. ಮೃತ ಬಸಪ್ಪ ಈತನು ತನ್ನ ಜೀವಿತ ಅವದಿವರೆಗೆ ದಾವಾ ಆಸ್ತಿಯ 3/7 ಹಿಸ್ಸೆ ಕಬಜಾ ವಹಿವಾಟಿ ಮಾಡುತ್ತಿದ್ದನು ಎಂದರೆ ಸರಿ. ಸದರಿ ಬಸಪ್ಪ ಈಗ ಕಳೆದ 4 ವರ್ಷ ಹಿಂದೆ ಮೃತಪಟ್ಟಿರುತ್ತಾನೆ ಎಂದರೆ ಸರಿ. ಸದರಿ ಬಸಪ್ಪರವರಿಗೆ 9 ರಿಂದ 14 ಪ್ರತಿವಾದಿಗಳು ವಾರಸಾದಾರರು ಇರುತ್ತಾರೆ ಎಂದರೆ ಸರಿ. ಬಸಪ್ಪನ ಮರಣಾನಂತರ ಆತನ ವಾರಸಾದಾರರು ಈ ಮೆಲಿನ ಎಲ್ಲ ಪ್ರತಿವಾದಿಗಳು ತಮ್ಮ 3/7 ಹಿಸ್ಸೆ ಜಮಿನನ್ನು ವಾರಸಾನಾತೆಯಿಂದ ಮಾಲ್ಕಿ ಕಬ್ಜಾ ವಹಿವಾಟಿನಲ್ಲಿ ಇರುತ್ತಾರೆ ಎಂದರೆ ಸರಿ. ನಾನು ಮತ್ತು ಮೃತ ಈರಪ್ಪ ತಲಾ 2/7 ಹಿಸ್ಸೆ ಪತ್ಯೇಕ ಒಡ್ಡು ಹಾಕಿಕೊಂಡು ಕಬ್ಜಾ ವಹಿವಾಟ ಮಾಡುತ್ತಿದ್ದೇವೆ ಎಂದರೇ ಸರಿ .ಅದೇ ರೀತಿ ಬಸಪ್ಪನ ವಾರಸದಾರರು ಸಹ ತಮ್ಮ 3/7 ಹಿಸ್ಸೆಯ ಜಮಿನನ್ನು ಪ್ರತ್ಯೇಕ ಒಡ್ಡು ಹಾಕಿಕೊಂಡು ಕಬ್ಜಾ ವಹಿವಾಟ ಮಾಡುತ್ತಿದ್ದಾರೆ ಎಂದರೆ ಸರಿ. ನಾನು ದಾವಾ ಆಸ್ತಿಯ 1/3 ಹಿಸ್ಸೆಯ ಕಬ್ಜಾದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಖರೀದಿ ಪತ್ರದ ಪ್ರಕಾರ ನಾನು 2/7 ಹಿಸ್ಸೆಯ ಮತ್ತು ಪ್ರತಿವಾದಿಗಳು ನಂ 9 ರಿಂದ 14 ರವರು 3/7 ಹಿಸ್ಸೆಯ ಪ್ರತ್ಯೇಕ ಕಬ್ಜಾದಲ್ಲಿ ಇರುತ್ತೇವೆ ಎಂದರೆ ಸರಿಯಲ್ಲ.

ಸಾಕ್ಷಿಗೆ 1/3 ಹಿಸ್ಸೆ , 2/7 ಹಿಸ್ಸೆ ಮತ್ತು 3/7 ಹಿಸ್ಸೆ ಗೊತ್ತಾಗುವುದಿಲ್ಲ ಎಂದು ವಾದಿ ಪರ ವಕೀಲರು ತಕರಾರು ಎತ್ತಿದ್ದು ಸಾಕ್ಷಿಗೆ ನ್ಯಾಯಾಲಯ 1/3, 2/7 ಮತ್ತು 3/7 ಹಿಸ್ಸೆ

O.S. NO. 351/2023
PW - 1.
Dated 22-07-2025

ಗೊತ್ತಾಗುತ್ತದಾ ಅಂತಾ ಸೂಚಿಸಲಾಗಿ ಆ ರೀತಿ ಲೆಕ್ಕ ಗೊತ್ತಾಗುವುದಿಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆ - ಇಲ್ಲ.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕೀಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.